

## ಜೇನುನೊಣಗಳ ಉಪಕಾರ!



ಪಕ್ಷಿಗಳಿಗಾಗಿ ಕಟ್ಟಿದ್ದ ಕೃತಕ ಗೂಡಿನಲ್ಲಿ ಜೇನುನೊಣಗಳು ವಾಸ್ತವ್ಯ ಹೂಡಿದವು. ಪೆಟ್ಟಿಗೆಯೊಳಗಿನ ಮೂಲೆಯಲ್ಲಿ ಆಶ್ರಯ ಪಡೆದಿದ್ದ ಇವು ನೋಡನೋಡುತ್ತಲೇ ತಮ್ಮ ಸಾಮ್ರಾಜ್ಯವನ್ನು ಇಡೀ ಪೆಟ್ಟಿಗೆಯ ತುಂಬಾ ವಿಸ್ತರಿಸಿದವು. ಪೆಟ್ಟಿಗೆಯ ಬಾಗಿಲೊಳಗಿಂದ ತುಂಬಿತುಳುಕುತ್ತಿದ್ದ ಹುಟ್ಟನ್ನು ಕಂಡ ಹಲವರು ತುಪ್ಪ ಬಿಡಿಸಿಕೊಳ್ಳುವಂತೆ ಸಲಹೆಯಿತ್ತರು. ಆದರೆ ಅವುಗಳ ಶ್ರಮವನ್ನು ಕಸಿಯುವ ಮನಸ್ಸಾಗದೇ ಹಾಗೇ ಬಿಟ್ಟೆ. ಈ ರೆಕ್ಕೆಮಿತ್ರರ ಸಂಸಾರ ಬಂದ ಬಳಿಕ ಕೈತೋಟದಲ್ಲಿ ಹಾಕಿದ್ದ ಸಾವಯವ ಬದನೆ, ಮೆಣಸಿನಕಾಯಿ, ಕಲ್ಲಂಗಡಿ ಕಾಯಿ, ಟೊಮ್ಯಾಟೊ ಮುಂತಾದ ತರಕಾರಿಗಳ ಇಳುವರಿ ನಿರಂತರವಾಗಿ ಹೆಚ್ಚುತ್ತಲೇ ಇದೆ. ಜೊತೆಗೆ ಅಕ್ಕಪಕ್ಕದವರ ತೋಟದಲ್ಲೂ ಇಳುವರಿ ಹೆಚ್ಚಾಗಿದೆ. ಸುಮಾರು ಆರು ತಿಂಗಳಿನಿಂದ ನಿರಂತರವಾಗಿ ಬೆಳಿಗ್ಗೆ ಮತ್ತು ಸಂಜೆ ಅವುಗಳ ಝೇಂಕಾರದ ಸಂಗೀತ ಕಛೇರಿ ಮನಸ್ಸಿಗೆ ಪುಳಕಿತ ಮನರಂಜನೆ ನೀಡಿದರೆ ಅವುಗಳ ಅವಿರತ ಪರಾಗಸ್ಪರ್ಶ ಕಾರ್ಯಕ್ರಮ ಇಳುವರಿ ಹೆಚ್ಚಿಸಿ ಆರೋಗ್ಯಕರ ತರಕಾರಿ ಒದಗಿಸುತ್ತಿದೆ.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ


## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly







## ಕ್ರೋಶದಲ್ಲಿ ಮೂಡಿಬಂದ ಭಾರತ

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದಿವೆ. ಈಗ ದೇಶದಲ್ಲೆಲ್ಲಾ ಅದರದೇ ಸಂಭ್ರಮ. ಎಲ್ಲರಲ್ಲೂ ಈ ವಿಶೇಷವಾದ ಸಂದರ್ಭಕ್ಕೆ ಏನಾದರೂ ವಿಶೇಷ ಚಟುವಟಿಕೆ ಮಾಡಬೇಕೆಂಬ ತುಡಿತ. ಹಾಗೆ ನಮ್ಮ ಅಪಾರ್ಟ್‌ಮೆಂಟಿನ ಮಹಿಳೆಯರಲ್ಲೂ ಮೂಡಿದ್ದು ಆಶ್ಚರ್ಯವೇನಲ್ಲ. ಅವರೆಲ್ಲ ಕ್ರೋಶ ಮಾಡುವುದನ್ನು ಕಲಿತು ವಿವಿಧ ರೀತಿಯ ಕುಶಲ ಕಲೆಯ ಸಾಮಾನುಗಳನ್ನು ಆಗಲೇ ಮಾಡುತ್ತಿದ್ದರು. ಈಗ 10 ಜನ ಹೆಂಗಳೆಯರು ಸೇರಿ ಹೊಸ ಯೋಜನೆಯೊಂದನ್ನು ಹಾಕಿಕೊಂಡರು. ಅದುವೇ ದೊಡ್ಡ ಗಾತ್ರದ ಭಾರತದ ಭೂಪಟವನ್ನು ಪುರಾತನ ಕಲೆಯಾದ ಕ್ರೋಶದಲ್ಲಿ ರೂಪಿಸುವುದು. ಈ ತಂಡದಲ್ಲಿ ನಾನೂ ಒಬ್ಬಳು.

ಭಾರತದ ಬಾವುಟದ ಬಣ್ಣವಾದ ತ್ರಿವರ್ಣದ ಬಣ್ಣಗಳ ರೂಪದಲ್ಲೇ ಭೂಪಟ ಮಾಡಲು ನಿರ್ಧರಿಸಿದರು. 10 ಭಾಗಗಳಾಗಿ ವಿಭಜಿಸಿ ಎಲ್ಲರೂ ಒಂದೊಂದು ಭಾಗವನ್ನು ಕ್ರೋಶದಲ್ಲಿ ಹಾಕಿ ಎಲ್ಲವನ್ನೂ ಸೇರಿಸುವುದು ಎಂದಾಯಿತು. ಭಾರತದ ಭೂಗೋಳದ ನಕ್ಷೆಯಂತೆ ಅಂಕು ಡೊಂಕುಗಳನ್ನು ಅನುಸರಿಸಿಕೊಂಡು ಕ್ರೋಶದಲ್ಲಿ ಮಾಡುವುದು ಕ್ಲಿಷ್ಟಕರವಾಗಿತ್ತಾದರೂ ಅದನ್ನು ಒಂದು ಸವಾಲಿನಂತೆ ಸ್ವೀಕರಿಸಿದ್ದಾರೆ.

ಬಹಳ ಉತ್ಸಾಹದಿಂದ ಎಲ್ಲರೂ ಸೇರಿ ಐದು ತಿಂಗಳುಗಳ ಕಾಲ ಕೆಲಸ ಮಾಡಿ 9 ಕೆಜಿ ಉಣ್ಣೆಯಿಂದ 4 ಅಡಿ ಉದ್ದ ಮತ್ತು 2 ಅಡಿಯ ಅಗಲದ ಭೂಪಟವನ್ನು ರಚಿಸಿದೆವು. ಮಧ್ಯದಲ್ಲಿ ಅಶೋಕ ಚಕ್ರವನ್ನು ಸಹ ಕ್ರೋಶದಲ್ಲಿ ಮಾಡಿ ಹೊಲಿಯಲಾಗಿದೆ. ಭೂಪಟವು ಕ್ಯಾನ್ವಾಸ್ ಮೇಲೆ ಹೊಲಿಯಲ್ಪಟ್ಟಿದೆ. ಕೆಳಗೆ ಶ್ರೀಲಂಕಾ ದೇಶವನ್ನೂ ಕ್ರೋಶದಿಂದ ಮಾಡಿ ಸೇರಿಸಲಾಗಿದೆ. ಅದರೊಂದಿಗೆ ಎಂಬ್ರಾಯಿಡರಿಯಲ್ಲಿ ಲಕ್ಷದ್ವೀಪಗಳು, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮೂಡಿಬಂದಿವೆ. ಮೇಲಿನ 'ಜೈ ಹಿಂದ್' ಎನ್ನುವ ಎಂಬ್ರಾಯಿಡರಿ ಹೊಲಿಗೆ ಮತ್ತು ಭೂಪಟಕ್ಕೆ ಒಂದು ಚೌಕಟ್ಟಿನಂತಿರುವ ತ್ರಿವರ್ಣದ ಅಂಚು ಅದಕ್ಕೆ ಮೆರಗನ್ನು ನೀಡಿದೆ. ಈ ಸುಂದರ ಭೂಪಟವನ್ನು ಅಪಾರ್ಟ್‌ಮೆಂಟಿನಲ್ಲಿ ವಾಸಿಸುತ್ತಿರುವ ಸಮುದಾಯಕ್ಕೆ ಅರ್ಪಿಸಿದೆವು. ಅದು ಸಮುದಾಯ ಭವನದಲ್ಲಿ ಭಾವೈಕ್ಯತೆ ಮತ್ತು ದೇಶಪ್ರೇಮದ ಸಂಕೇತವಾಗಿ ಹೆಮ್ಮೆಯಿಂದ ನಿಂತಿದೆ.

—ಅಂಬಿಕಾ ಆರ್., ಬೆಂಗಳೂರು